ಸಾಕ್ಷಿಯನ್ನು ಕರೆಯಿಸಿ ಪುನಃ ಪ್ರಮಾಣ ವಚನ ಮಾಡಿಸಲಾಯಿತು. ದಿಃ **14.06.2022**

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಸಿ.ಸಿ.ಬಿ ರವರಿಂದಃ

ಸಾಕ್ಷಿಗೆ 1989–90 ರಿಂದ 1993–94 ನೇ ಸಾಲಿನ ಸರ್ವೆ ನಂಬರ್ 116/1 ರ ಜಮೀನಿನ ಪಹಣಿ ಪತ್ರಿಕೆಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ಪ್ರತಿವಾದಿ ಪರವಾಗಿ ನಿಡಿ 4 ಎಂದು ಗುರುತಿಸಲಾಯಿತು. ಸದರಿ ದಾಖಲೆಯ ಕಾಲಂ ನಂಬರ್ 12 ಸಾಗುವಳಿದಾರರ ಹೆಸರು ಇದ್ದು, ಆದರೂ ಸಹ ಸದರಿ ಜಮೀನಿನಲ್ಲಿ ನಾನೇ ಸಾಗುವಳಿ ಮಾಡುತ್ತಿದ್ದೇನೆ. ಸರ್ವೆ ನಂಬರ್ 146/1 ಜಮೀನನ್ನು ನನ್ನ ತಂದೆ ಖರೀದಿ ಮಾಡಿರುತ್ತಾರೆಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನಾನೇ ಖರೀದಿ ಮಾಡಿರುತ್ತೇನೆಂದು ಸ್ವತಃ ಉತ್ತರಿಸಿರುತ್ತಾರೆ.

ನಮ್ಮ ಕುಟುಂಬದ ಮೂಲ ಪುರುಷ ರುದ್ರಪ್ಪ ಮೃತನಾದ ನಂತರ ಕುಟುಂಬದ ಎಲ್ಲ ಜವಾಬ್ದಾರಿಯನ್ನು ನನ್ನ ತಂದೆ ಕೊಟ್ರಪ್ಪ ನೋಡಿಕೊಳ್ಳುತ್ತಿದ್ದ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1956 ರಲ್ಲಿಯೇ ನನ್ನ ತಂದೆ ಒಟ್ಟು ಕುಟುಂಬದಿಂದ ಬೇರೆಯಾಗಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನನ್ನ ತಂದೆ 1956 ರಲ್ಲಿಯೇ ಒಟ್ಟು ಕುಟುಂಬದಿಂದ ಬೇರೆಯಾಗಿರುತ್ತಾನೆಂದು ತೋರಿಸಲು ಪಹಣಿ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನನ್ನ ತಂದೆ 1956 ರಲ್ಲಿಯೇ ಒಟ್ಟು ಕುಟುಂಬದಿಂದ ಪ್ರತ್ಯೇಕವಾಗಿರುತ್ತಾನೆಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 1956 ರಲ್ಲಿ ಪ್ರತ್ಯೇಕವಾದ ನಂತರ ನಮ್ಮ ಒಟ್ಟು ಕುಟುಂಬದ ಆಸ್ತಿಗಳಾದ ಸರ್ವೆ ನಂಬರ್ 71/1, 71/2, 87/1, 88/3, 72/1, 72/2 ಹಾಗೂ ಸರ್ವೆ ನಂಬರ್ 146/3, 182 ರಲ್ಲಿ ಹಿಸ್ಸೆಗಳು ಆಗಿರುತ್ತವೆ. ಈ ರೀತಿ ಜಮೀನುಗಳಲ್ಲಿ ಹಿಸ್ಸೆಯಾಗಿರುವ ಬಗ್ಗೆ ನಾನು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ, ಸಾಕ್ಷಿ ಮುಂದುವರೆದು ಪಹಣಿ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಈ ಕುರಿತು ನಿಡಿ 1 ರಲ್ಲಿ ಈ ಮೇಲೆ ಹೇಳಿದ ಜಮೀನುಗಳ ಜೊತೆ ಖಾನೇಷುಮಾರಿ ನಂಬರ್ 111 ರ ಬಗ್ಗೆ ಉಲ್ಲೇಖ ಇದೆ ಎಂದರೆ ಸರಿ.

ನಿಪಿ 5 ರಂತೆ ಖಾತೆ ಬದಲಾವಣೆ ಆದ ಬಗ್ಗೆ ನನಗೆ 1998 ರಲ್ಲಿಯೇ ಮಾಹಿತಿ ಗೊತ್ತಿತ್ತು ಎಂದರೆ ಸರಿ. 1998 ರಲ್ಲಿ ಖಾತೆ ಬದಲಾವಣೆ ಆಗಿರುವ ಬಗ್ಗೆ ಮಾಹಿತಿ ಗೊತ್ತಾದ ಮೇಲೆ, ಸದರಿ ಖಾತೆ ಬದಲಾವಣೆ ಆದೇಶವನ್ನು ರದ್ದುಪಡಿಸುವಂತೆ ತಹಶೀಲ್ದಾರ್ ಅಥವಾ ಉಪ ವಿಭಾಗಾಧಿಕಾರಿಗಳ ಮುಂದೆ ಯಾವುದೇ ಪ್ರಕರಣವನ್ನು ದಾಖಲಿಸಿಲ್ಲ, ಅದೇ ರೀತಿ ಸಿವಿಲ್ ನ್ಯಾಯಾಲಯದಲ್ಲೂ ಸಹ ನಾನು ಪ್ರಕರಣವನ್ನು ದಾಖಲಿಸಿರುವುದಿಲ್ಲ. ನಿಪಿ 2 ರಲ್ಲಿ ಪ್ರತಿವಾದಿ ನಂಬರ್ 2 ರವರ ಹೆಸರು ಇಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಸಾಕ್ಷಿಗೆ ನಮೂನೆ 11 ಸಿ ಅಡಿಯಲ್ಲಿ ನೀಡಿದ ಸರ್ವೆ ನೋಟೀಸ್ ನ ಮೇಲೆ ಇರುವ ತನ್ನ ಸಹಿಯನ್ನು ಗುರುತಿಸಲು ಹೇಳಿದಾಗ ಸಾಕ್ಷಿಯು ಅದರ ಮೇಲೆ ನನ್ನ ಸಹಿ ಇರುವುದಿಲ್ಲ ಎಂದು ಹೇಳಿರುತ್ತಾರೆ, ಸದರಿ ದಾಖಲೆಯನ್ನು ಗುರುತಿಗಾಗಿ ನಿಸಿ 1 ಎಂದು ಗುರುತಿಸಲಾಯಿತು. ಅದೇ ರೀತಿ ತನ್ನ ವಕೀಲರಿಗೆ ನೀಡಿದ ವಕಾಲತ್ ನ್ನು ತೋರಿಸಲಾಗಿ ಅದರ ಮೇಲೆ ಇರುವ ಸಹಿ ನನ್ನದಲ್ಲ ಎಂದು ಉತ್ತರಿಸಿರುತ್ತಾರೆ. ಸಾಕ್ಷಿಗೆ ತಾನು ನ್ಯಾಯಾಲಯಕ್ಕೆ ಸಲ್ಲಿಸಿದ ಮಧ್ಯಂತರ ಅರ್ಜಿಯ ಪ್ರಮಾಣ ಪತ್ರದ ಮೇಲೆ ಇರುವ ಸಹಿ ತನ್ನದೇ ಎಂದು ಗುರುತಿಸಿರುತ್ತಾರೆ.

ನಮ್ಮ ಊರಿನ ಭರಮಗೌಡರು ನನಗೆ ಗೊತ್ತು, ಆದರೆ ಅವರು ಮೃತರಾಗಿರುತ್ತಾರೆ. ನನ್ನ ಚಿಕ್ಕಪ್ಪ ಈರಪ್ಪ ನನಗೆ ಯಾವುದೇ ರೀತಿಯಿಂದ ಸಂಬಂಧ ಇಲ್ಲ, ಕಾರಣ ಅವನು ದತ್ತಕ ಹೋಗಿರುತ್ತಾನೆ. ಸಾಕ್ಷಿಗೆ ನಿಡಿ 1 ರಂತೆ ಇರುವ ದಾಖಲೆಯನ್ನು ತೋರಿಸಲಾಗಿ ಅದರ ಮೇಲೆ ಭರಮಗೌಡ, ಕೊಟ್ರೇಶಪ್ಪ ವೃತ್ತಿಕೊಪ್ಪ ಮತ್ತು ಈರಪ್ಪ ರವರ ಸಹಿಗಳು ಇವೆ ಎಂದರೆ ಇರಬಹುದು ಎಂದು ಉತ್ತರಿಸಿರುತ್ತಾರೆ. 2 ನೇ ಪ್ರತಿವಾದಿಯು ತನ್ನ ಹಿಸ್ಸಾಕ್ಕೆ ಬಂದಿರುವ ಜಮೀನನ್ನು 2014 ರಲ್ಲಿ ಪೋಡ್ (ಸಬ್ ಡಿವಿಜನ್) ಮಾಡಿಕೊಂಡಿರುತ್ತಾನೆಂದರೆ ಎಂದರೆ ಸರಿಯಲ್ಲ. ನಾನು ಕುಟುಂಬದ ಹಿರಿಯನಾಗಿರುವುದರಿಂದ ನನ್ನ ಹೆಸರಿನಲ್ಲಿ ದಾವಾ ಆಸ್ತಿಯನ್ನು ಖರೀದಿಸಿರುತ್ತಾರೆಂಬ ಕಾರಣದಿಂದ ಈ ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನೇ ಹಿಸ್ಸಾ ಪತ್ರ ಮಾಡಿಕೊಂಡಿದ್ದರೂ ಸಹ ಹಿಸ್ಸಾ ಪತ್ರ ಆಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಹಿಸ್ಸಾ ಪತ್ರದ ಪ್ರಕಾರ ಹಕ್ಕು ಬದಲಾವಣೆ ರದ್ದು ಆಗಿದ್ದು, ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸರ್ವೆ ನಂಬರ್ 89 ತಳವಾರ್ ಉಂಬಳಿ ಸ್ವತ್ತು ಎಂದರೆ ಸರಿ, ಸದರಿ ಸ್ವತ್ತನ್ನು ಹಿಸ್ಸಾ ಪತ್ರದಲ್ಲಿ ಸೇರ್ಪಡೆ ಮಾಡಿರುವುದರಿಂದ ಸರ್ಕಾರದವರು ಹಕ್ಕು ಬದಲಾವಣೆಯನ್ನು ರದ್ದುಪಡಿಸಿರುತ್ತಾರೆಂದರೆ ಸರಿ.

ನನಗೆ ಒಬ್ಬಳು ಹಿರಿಯ ಸಹೋದರಿ ಇದ್ದಳು, ಅವಳ ಹೆಸರು ನಾಗಮ್ಮ ಎಂದು ಇತ್ತು, ಅವಳು ಮೃತಳಾಗಿರುತ್ತಾಳೆ. ಸರ್ವೆ ನಂಬರ್ 89, 116 ಮತ್ತು 146 ನನ್ನ ಹೆಸರಿನಲ್ಲಿ ಖರೀದಿ ಆಗಿದೆ ಎಂಬ ಕಾರಣದಿಂದ ಈ ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಕೊಟ್ರಪ್ಪ, ರುದ್ರಪ್ಪ, ವೀರಭದ್ರಪ್ಪ ರವರಲ್ಲಿ ನನ್ನ ತಂದೆ ಕೊಟ್ರಪ್ಪ ಹಿರಿಯನಾಗಿರುವುದರಿಂದ ಅವರು ಕುಟುಂಬದ ಜವಾಬ್ದಾರಿಯನ್ನು ನೋಡಿಕೊಂಡು ಹೋಗುತ್ತಿದ್ದರು, ಅವರು ಮೃತನಾದ ನಂತರ ನಾನು ಕುಟುಂಬದ ಜವಾಬ್ದಾರಿಯನ್ನು ನೋಡಿಕೊಂಡು ಹೋಗುತ್ತಿದ್ದರಿಂದ ನನ್ನ ಹೆಸರಿನಲ್ಲಿ ಕುಟುಂಬದ ಆಸ್ತಿಗಳನ್ನು ಖರೀದಿಸಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಆಸ್ತಿಗಳನ್ನು ಒಟ್ಟು ಕುಟುಂಬದಿಂದ ಪ್ರತ್ಯೇಕವಾದ ನಂತರ ಖರೀದಿಸಲಾಗಿದೆ ಎಂದು ಉತ್ತರಿಸಿರುತ್ತಾರೆ. ನಮ್ಮ ಕುಟುಂಬದಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಪಡೆದಿರುವುದರಿಂದ ಕುಟುಂಬದ ಎಲ್ಲ ವ್ಯವಹಾರಗಳನ್ನು ನನ್ನ ಹೆಸರಿನಲ್ಲಿಯೇ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಹಿಸ್ಸಾ ಪತ್ರದ ಪ್ರಕಾರ ನನ್ನ ಹಿಸ್ಸೆಗೆ ಬಂದಿರುವ ಜಮೀನುಗಳಲ್ಲಿ ಸಾಗುವಳಿ ಮಾಡುತ್ತಿದ್ದರೂ ಸಹ ಖರೀದಿ ಪತ್ರಗಳ ಆಧಾರದ ಮೇಲೆ ಸಾಗುವಳಿ ಮಾಡುತ್ತಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿ ನಂಬರ್ 2 ಮತ್ತು 3 ರವರಿಗೆ ವ್ಯವಹಾರ ಜ್ಞಾನ ಇರುವುದಿಲ್ಲ ಎಂದರೆ ಸರಿಯಲ್ಲ. ಹಿಸ್ಸಾ ಪತ್ರದ ಪ್ರಕಾರ ಜಮೀನುಗಳಲ್ಲಿ ಸಾಗುವಳಿ ಮಾಡುತ್ತಿದ್ದರೂ ಸಹ ಖರೀದಿ ಪತ್ರದ ಆಧಾರದ ಮೇಲೆ ಜಮೀನನ್ನು ಸಾಗುವಳಿ ಮಾಡುತ್ತಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

OS 58/2016
PW 1

**ಮರು ವಿಚಾರಣೆಃ ಇಲ್ಲ**.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದ ರೀತ್ಯಾ ಕಂಪ್ಯೂಟರೀಕರಿ ಸಲಾಯ್ತು).

ಓದಿ, ಹೇಳಿ, ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ.

**ಅಪರ** ಸಿವಿಲ್ ನ್ಯಾ. ಮತ್ತು ಜೆ ಎಂ ಎಫ್ ಸಿ, **ಸೊರಬ**